Get Printed Study Notes for UPSC Exam - https://iasexamportal.com/notes

Civil Services (Main) Examination- 2025

SLPM-U-KND

# ಕನ್ನಡ / KANNADA

## ಪತ್ರಿಕೆ I / Paper I

## (ಸಾಹಿತ್ಯ) / (LITERATURE)

ವೇಳೆ : ಮೂರು ಗಂಟೆ
*Time Allowed : **Three** Hours*

ಗರಿಷ್ಠ ಅಂಕಗಳು : 250
*Maximum Marks : **250***

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು ಭಾಗಗಳಲ್ಲಿ** ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು ***5***ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

*The number of marks carried by a question / part is indicated against it.*

*Answers must be written in **KANNADA (Kannada script)**.*


*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---








**CLICK LINK FOR STUDY NOTES :**

https://iasexamportal.com/study-kit/upsc-complete-study-material

Get Printed Study Notes for UPSC Exam - https://iasexamportal.com/notes

## SECTION A

**Q1.** ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. *10×5=50*

(a) ಭಾಷೆ ಎಂದರೇನು ? *10*

(b) 'ಭರತೇಶ ವೈಭವ' ಕಾವ್ಯದ ಕುಸುಮಾಂಜಲಿಯ ಪಾತ್ರ ವೈಶಿಷ್ಟ್ಯ *10*

(c) ವಚನ ಸಾಹಿತ್ಯದಲ್ಲಿ ಕಾಯಕ ತತ್ತ್ವದ ಮಹತ್ವ *10*

(d) ಕನಕದಾಸರ ಕೀರ್ತನೆಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ಪ್ರಜ್ಞೆಯನ್ನು ವಿವರಿಸಿ. *10*

(e) ಪ್ರಗತಿಶೀಲ ಸಾಹಿತ್ಯದಲ್ಲಿ ಶೋಷಣೆಯ ಚಿತ್ರಣ *10*

**Q2.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಕನ್ನಡ ಭಾಷೆಯ ಸಾಮಾನ್ಯ ಗುಣಲಕ್ಷಣಗಳನ್ನು ಉದಾಹರಣೆಗಳ ಸಹಿತ ವಿವರಿಸಿ. *20*

(b) 'ಪಂಪಭಾರತ' ದಲ್ಲಿ ದ್ರೌಪದಿಯ ಮಾನಭಂಗದ ಸಂದರ್ಭದಲ್ಲಿ ಆಕೆ ತೋರುವ ಪ್ರತಿರೋಧದ ಅಂಶಗಳನ್ನು ಗುರುತಿಸಿ. *20*

(c) ಕನ್ನಡ ನವೋದಯ ಕಾವ್ಯದ ಪ್ರವೃತ್ತಿಗಳನ್ನು ವಿವೇಚಿಸಿ. *10*

**Q3.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಚಾರಿತ್ರಿಕ ಬೆಳವಣಿಗೆಯಲ್ಲಿ ಕನ್ನಡ ಭಾಷೆಯಲ್ಲಿ ಕಂಡುಬರುವ ಅರ್ಥ ಬದಲಾವಣೆಯನ್ನು ಧ್ವನ್ಯಾತ್ಮಕ ನೆಲೆಯಲ್ಲಿ ವಿವರಿಸಿ. *20*

(b) ಆಧುನಿಕ ಕನ್ನಡ ಕಥನ ಸಾಹಿತ್ಯದ ಮುಖ್ಯ ಲಕ್ಷಣಗಳನ್ನು ವಿಶ್ಲೇಸಿಸಿ. *20*

(c) ಮಧ್ಯಕಾಲೀನ ಭಾರತ ಭಕ್ತಿಪರಂಪರೆಯ ಹಿನ್ನೆಲೆಯಲ್ಲಿ ಕನ್ನಡದ ದಾಸ ಸಾಹಿತ್ಯದ ಸ್ವರೂಪವನ್ನು ವಿವೇಚಿಸಿ. *10*

**Q4.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) 'ಕುಮಾರವ್ಯಾಸ ರೂಪಕ ಸಾಮ್ರಾಜ್ಯದ ಚಕ್ರವರ್ತಿ' ಎಂಬ ಹೇಳಿಕೆಯನ್ನು ಕುಮಾರವ್ಯಾಸ ಭಾರತದಲ್ಲಿನ ರೂಪಕಗಳ ಮೂಲಕ ಸ್ಪಷ್ಟೀಕರಿಸಿ. *20*

(b) ದಲಿತ ಹಾಗೂ ಬಂಡಾಯ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪಗಳನ್ನು ವಿಶ್ಲೇಷಿಸಿ. *20*

(c) 'ಹರಿಶ್ಚಂದ್ರ ಕಾವ್ಯ' ದಲ್ಲಿ ಸತ್ಯ ಹರಿಶ್ಚಂದ್ರ 'ನುಡಿದಂತೆ ನಡೆದುಕೊಂಡ' ರೀತಿಯನ್ನು ವಿವೇಚಿಸಿ. *10*



Download FREE UPSC E-BOOKS FREE! CLICK HERE

Get Printed Study Notes for UPSC Exam - https://iasexamportal.com/notes

## SECTION B

**Q5.** ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. *10×5=50*

(a) ಆನಂತವರ್ಧನನ ಧ್ವನಿ ಸಿದ್ಧಾಂತ *10*

(b) ಕನ್ನಡದಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆ *10*

(c) ಕರ್ನಾಟಕ ಸಂಸ್ಕೃತಿಯ ಅನನ್ಯ ಸ್ವರೂಪ *10*

(d) ಭಾರತೀಯ ವಾಸ್ತುಶಿಲ್ಪ ಕ್ಷೇತ್ರಕ್ಕೆ ಹೊಯ್ಸಳರ ಕೊಡುಗೆ *10*

(e) ವಿಜಯನಗರ ಅರಸರ ಕಾಲದ ಚಿತ್ರಕಲೆ *10*

**Q6.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ರಸನಿಷ್ಪತ್ತಿ ಎಂದರೇನು ? ಭರತನ ರಸಸಿದ್ಧಾಂತವನ್ನು ವಿವರಿಸಿ. *20*

(b) ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ "ಧರ್ಮಸಮನ್ವಯತೆ" ಯನ್ನು ಕುರಿತು ಬರೆಯಿರಿ. *20*

(c) ವಸಾಹತೋತ್ತರ ಕನ್ನಡ ವಿಮರ್ಶೆಯ ಕಾರ್ಯವನ್ನು ವಿವೇಚಿಸಿ. *10*

**Q7.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಕ್ಷೇಮೇಂದ್ರನ ಔಚಿತ್ಯ ವಿಚಾರ ಸಿದ್ಧಾಂತದ ಪ್ರಸ್ತುತತೆಯನ್ನು ಚರ್ಚಿಸಿ. *20*

(b) ಚಾರಿತ್ರಿಕ ವಿಮರ್ಶೆಯ ಸ್ವರೂಪವನ್ನು ವಿವರಿಸಿ. *20*

(c) ಬಾದಾಮಿ ಮತ್ತು ಕಲ್ಯಾಣ ಚಾಲುಕ್ಯರ ಆಡಳಿತ ವ್ಯವಸ್ಥೆಯ ವ್ಯತ್ಯಾಸಗಳನ್ನು ವಿವೇಚಿಸಿ. *10*

**Q8.** ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :

(a) ಕಾವ್ಯದಲ್ಲಿ ಅಲಂಕಾರಗಳ ಪ್ರಾಮುಖ್ಯತೆಯನ್ನು ವಿವರಿಸಿ. *20*

(b) ಕನ್ನಡ ಸಾಹಿತ್ಯಕ್ಕೆ ರಾಷ್ಟ್ರಕೂಟರು ನೀಡಿದ ಕಾಣಿಕೆಗಳನ್ನು ನಿರೂಪಿಸಿ. *20*

(c) ಸಾಂಸ್ಕೃತಿಕ ಅಧ್ಯಯನದ ಮಹತ್ವವನ್ನು ಕುರಿತು ಚರ್ಚಿಸಿ. *10*





Get Printed Study Notes for UPSC Exam - https://iasexamportal.com/notes

